


**ಎಡದಿಂದ ಬಲಕ್ಕೆ:**

1.ಜಾದೂಗಾರನ ವೇಷದಲ್ಲಿ ಬಂದಿದ್ದಾನೆ, ಕೆಟ್ಟ ಮನುಷ್ಯ 3
3.ಗರುಡನನ್ನು ತೋರಿಸಿ ಅಲ್ಲೇ ಮಾಯಮಾಡಿದ್ದು ಇಂದ್ರಜಾಲ ಅಷ್ಟೆ 3
4.ಕಾಡುಗಳ ಮಹಿಮೆ, ಎಷ್ಟು ಹೇಳಿದರೂ ಹೆಚ್ಚಿಲ್ಲ 3
6.ಮೇಲಿನವರ ಜೊತೆ ಮಾತನಾಡುವಾಗ ಎಂಥ ಮೆತ್ತಗಿನ ಧ್ವನಿ! 3
7. ಬಾಲ ಕಟ್ಟಿದಂತೆ ಸದಾ ಆತನ ಹಿಂದೆಯೇ ಸುತ್ತುವ ಹುಡುಗ 4
9. ಸೇಂಗಾ ಬೆಳೆವ ಕೆಲಸವೂ ವ್ಯವಸಾಯವೇ ಅಲ್ಲವೇ? 4
11. ಸರಗಳ್ಳರ ಮೇಲೆ ದಾಳಿ ಮಾಡಲು ಬಳಸಿದ್ದು ಇದೇ ಕಬ್ಬು 4
13. ನೂರು ಮುಟ್ಟುವ ತನಕ ಯಾವ ಭಯವೂ ಇಲ್ಲ 4
15. ಹೇಳದಿದ್ದರೇನು ? ಆಕೆ ಕೊಂಡ ವಸ್ತು ಅರಿಶಿನ ತಾನೇ? 3
17. ಸೇವಂತಿಗೆಯನ್ನು ಮಾರುತ್ತಿರುವವನ ವಿಶೇಷ ವಸ್ತ್ರವನ್ನು ನೋಡಿದಿರಾ? 3
18. ಕೊನೆಗೂ ಋಣಮುಕ್ತನಾದ ಆಕೆಯ ಪತಿ 3
19. ಪುಸ್ತಕವನ್ನು ಮುಟ್ಟಲೇ ಇಲ್ಲ. ಅದಕ್ಕೇ ತೇರ್ಗಡೆಯೂ ಇಲ್ಲ 3

**ಮೇಲಿಂದ ಕೆಳಕ್ಕೆ:**

1. ಆತ ಮಾಡಿದ್ದು ಶ್ರಮದಾಯಕ ಕೆಲಸ 3
2. ಆಸಕ್ತಿಯಿಂದ ಕಲಿವವನಂತೆ ನಟನೆ; ಅದು ಬರೀ ಹಾಸ್ಯ 3
3. ಗವಿಯಲ್ಲೂ ಭಯಪಡಲಿಲ್ಲ, ಹಳ್ಳಿಯವ 3
5. ಮುಂಗಾರು ಬಂತೆಂದರೆ ಗಿಡಮರಗಳಲ್ಲಿ ಎಂಥ ಹೊಳಪು! 3
7. ಹೊಸ ವಿಚಾರವನ್ನು ವಿರೋಧಿಸಲು ನೋವು ನೀಡುವ ನಡವಳಿಕೆ ಏಕೆ? 4
8. ಇಲ್ಲಿನ ಜನರನ್ನು ಕೇಳುವವರೇ ಇಲ್ಲ. ಇದು ಕಡಲ ತೀರದ ಪ್ರದೇಶ 4
9. ಸಾಗಿಸುವಾಗ ಸ್ವಲ್ಪವೂ ಹಾನಿಯಾಗಬಾರದು; ಅದು ತೇಗದ ಮರ 4
10. ಕಳ್ಳ ಕಳ್ಳಿಯರನ್ನು ಬಂಧಿಸುವ ಆಸಕ್ತಿಯೇ ತಲೆಕೆಳಗು! 4
12. ಬೆಳೆದಿದ್ದ ಧಾನ್ಯವನ್ನೆಲ್ಲ ನಾಶ ಮಾಡಿದ, ದೇವ ವಿರೋಧಿ ವ್ಯಕ್ತಿ 3
14. ವರುಣನನ್ನೂ ಹೆದರಿಸುತ್ತಿದ್ದನಂತೆ, ಈ ಮಹಾ ರಾಕ್ಷಸ 3
15. ಹಾನಿಮಾಡ ಬಂದವನನ್ನು ಕೊಂದು ಹಾಕುವುದೇ? 3
16. ಧೈರ್ಯ ತೋರಿಸುವ ಲಕ್ಷಣ ಹೊಂದಿದೆ ಇದೆಂಥ ಉಡುಪು? 3

---

## 12-03-2020 ಉತ್ತರಗಳು

ಎಡದಿಂದ ಬಲಕ್ಕೆ:

1. ಪಕ್ಷಪಾತ 3. ಪ್ರಮಾದ 4. ವರ್ಧನ 6. ಸಂಪಾದನೆ 8. ತರುಲತೆ 10. ಯತ್ನಫಲ 12. ಮನಸಾರೆ 16. ಕಡಲು 17. ಮಾರ್ಜಕ 18. ಪುರಾತನ

ಮೇಲಿಂದ ಕೆಳಕ್ಕೆ:

1. ಪದವಿ 2. ತವರ 3. ಪ್ರಸಾದ 5. ನಜರು 6. ಸಂಪ್ರದಾಯ 7. ನೆಲಬಲ 8. ತರತಮ 9. ತೆರೆಮರೆ 11. ಫಲಕ 13. ನರಕ 14. ತಲುಪು 15. ಸಮಾನ

ಪ್ರಶ್ನಾ ಂಕಣ

# ಲೈನ್ ದ್ವೀಪಗಳು: ಏನು ವಿಶೇಷ?

ಲೈನ್ ದ್ವೀಪಗಳು (Line Islands) ಅದೊಂದು ದ್ವೀಪ ಸಮೂಹ. ಈ ಸಮೂಹದ ದ್ವೀಪಗಳು ಪೆಸಿಫಿಕ್ ಮಹಾ ಸಾಗರದಲ್ಲಿ ಸಮಭಾಜಕ ರೇಖೆಯ ಮೇಲೆ ಕೆಳಗೆ, ವಾಯವ್ಯದಿಂದ ಆಗ್ನೇಯಕ್ಕೆ ಸಾಲಾಗಿ ಹಬ್ಬಿ ನಿಂತಿವೆ (ಚಿತ್ರ 1ರಲ್ಲಿ ದೀರ್ಘ ವೃತ್ತ ಸೂಚಿಸುತ್ತಿರುವ ಪ್ರದೇಶ); ಹಾಗಾಗಿಯೇ 'ಸಾಲು ದ್ವೀಪಗಳು' ಎಂಬ ಅಭಿಧಾನವನ್ನು ಪಡೆದಿವೆ. ಈ ದ್ವೀಪ ಸ್ತೋಮ ಹವಾಯ್ ದ್ವೀಪಗಳ ದಕ್ಷಿಣಕ್ಕೆ 2400ರಿಂದ 3300 ಕಿ.ಮೀ ದೂರಗಳ ನಡುವೆ, ಎಂದರೆ 900 ಕಿ.ಮೀ ಉದ್ದಕ್ಕೆ ಹರಡಿಕೊಂಡಿದೆ. ಲೈನ್ ದ್ವೀಪ ಸ್ತೋಮದಲ್ಲಿ ಪುಟ್ಟ ಪುಟ್ಟ ಒಟ್ಟು ಹನ್ನೊಂದು ದ್ವೀಪಗಳಿವೆ ; ಅವುಗಳ ಒಟ್ಟೂ ವಿಸ್ತಾರ ಸುಮಾರು 500 ಚದರ ಕಿ.ಮೀನಷ್ಟಿದೆ. ಉತ್ತರ, ಮಧ್ಯ ಮತ್ತು ದಕ್ಷಿಣ ಲೈನ್ ದ್ವೀಪಗಳು ಎಂದು ವರ್ಗೀಕರಿಸಲಾಗಿರುವ ಈ ದ್ವೀಪಗಳಲ್ಲಿ ಎಂಟು ದ್ವೀಪಗಳು 'ಕಿರಿಬಾತಿ' ದೇಶಕ್ಕೂ, ಮೂರು ದ್ವೀಪಗಳು ಯು.ಎಸ್.ಎಗೂ ಸೇರಿವೆ. ಇವುಗಳಲ್ಲಿ 'ಟೆರೈನಾ ದ್ವೀಪ'ವೊಂದನ್ನು ಬಿಟ್ಟು ಇನ್ನೆಲ್ಲೂ ಮನುಷ್ಯರು ನೆಲೆಸಿಲ್ಲ. ಅದೇ ಲೈನ್ ದ್ವೀಪಗಳ ಪ್ರಥಮ ವಿಶೇಷ.

ಲೈನ್ ದ್ವೀಪಗಳ ಪರಮ ವಿಶೇಷ ಏನೆಂದರೆ, ಈ ದ್ವೀಪಗಳನ್ನು, ಅದರಲ್ಲೂ ದಕ್ಷಿಣದ ಗುಂಪಿನ ಐದು ದ್ವೀಪಗಳಾದ 'ಮಾಲ್ಡೆನ್, ಸ್ಟಾರ್ ಬಕ್, ವೋಸ್ಟೋಕ್, ಫ್ಲಿಂಟ್ ಮತ್ತು ಮಿಲೆನಿಯಂ (ಚಿತ್ರ 3)ಗಳನ್ನು ಪರಿವರಿಸಿರುವ ಸಾಗರ ಪ್ರದೇಶ 'ಅಕ್ಷತ'ವಾಗಿದೆ. ಎಂದರೆ, ಅಲ್ಲಿನ ಸಾಗರಾವಾರ ಮಾನವ ಹಸ್ತಕ್ಷೇಪ ರಹಿತವಾಗಿ, ವಿಷಕಲ್ಮಶ ರಹಿತವಾಗಿ, ಜೀವಿ ಭರಿತವಾಗಿ ನಿಸರ್ಗದ ಮೂಲ ಸೃಷ್ಟಿ ಸ್ವರೂಪದಲ್ಲೇ ಉಳಿದಿದೆ. ಇಲ್ಲಿರುವಂತಹ ನಿಷ್ಕಳಂಕ ಪರಿಸರ ಧರೆಯ ಇನ್ನಾವ ಕಡಲ ಪ್ರದೇಶದಲ್ಲೂ ಇಲ್ಲ. ಇಲ್ಲಿನ ಕಡಲ ತಳದ ಶೇಕಡ 90 ರಷ್ಟು ಪ್ರದೇಶವನ್ನು ಹವಳ ಲೋಕ ಆವರಿಸಿದೆ (ಚಿತ್ರ 2). ಗರಿಷ್ಠ ವೈವಿಧ್ಯದ ಜೀವಿ ಸಮೃದ್ಧವಾಗಿ, ಸಕಲ




'ಜೀವ ಸರಪಳಿ'ಗಳೂ ಅತ್ಯಂತ ಸುರಕ್ಷಿತವಾಗಿ, ಬೇಟೆಗಾರಬಲಿಪ್ರಾಣಿ ಸಮತೋಲನ ಸಂಪೂರ್ಣ ಸುಭದ್ರವಾಗಿ... ಹಾಗೆಲ್ಲ ಈ ದ್ವೀಪಗಳ ನೆಲ ಮತ್ತು ಕಡಲುಗಳ ಪರಿಸರ ಅತ್ಯಂತ ಪರಿಶುದ್ಧ ಮತ್ತು ಆರೋಗ್ಯಕರ ಮೂಲ ಸ್ಥಿತಿಯಲ್ಲೇ ಉಳಿದಿದೆ!

ಲೈನ್ ದ್ವೀಪಗಳನ್ನು ಪರಿವರಿಸಿರುವ ಕಡಲಲ್ಲಿ ಕಲ್ಮಶಗಳು ಅತ್ಯಂತ ಕಡಿಮೆ; ಹಾನಿಕಾರಕ ಬ್ಯಾಕ್ಟೀರಿಯಾಗಳು ಕನಿಷ್ಠ. ಅಲ್ಲಿನ ಕಡಲ ನೀರಿನಲ್ಲಿ ಲವಣಾಂಶವೂ ತುಂಬ ಕಡಿಮೆ. ಅಲ್ಲಿ ಸಾಗರದ ಅಬ್ಬರ ಮತ್ತು ಚಂಡಮಾರುತಗಳ ಅವಾಂತರ ಕೂಡ ಬಹಳ ಇಲ್ಲ. ಹಾಗಾಗಿ ಈ ದ್ವೀಪಗಳ ಹವಳ ಸಾಮ್ರಾಜ್ಯಕ್ಕೆ ನೈಸರ್ಗಿಕ ಹಾವಳಿಗಳ ಭಯ ಒದಗಿಲ್ಲ ; ಅಲ್ಲಿನ ಹವಳ ರಾಜ್ಯ ಕಿಂಚಿತ್ತೂ ಭಗ್ನವಾಗಿಲ್ಲ; ನಿರ್ವರ್ಣವಾಗಿಲ್ಲ. ಅಷ್ಟೇ ಅಲ್ಲದೆ ಈ ದ್ವೀಪಗಳ ಸುತ್ತ ಮೀನುಗಾರಿಕೆ ಇತ್ಯಾದಿ ಸಕಲ ವಿಧ ಮನುಷ್ಯ ಚಟುವಟಿಕೆಗಳನ್ನೂ ಸಂಪೂರ್ಣ ನಿಷೇಧಿಸಲಾಗಿದೆ ಕೂಡ. ಹಾಗಾಗಿ, ಲೈನ್ ದ್ವೀಪಗಳು ಈ ವರೆಗೂ ಅಕ್ಷತವಾಗಿ, ಸುರಕ್ಷಿತವಾಗಿ ಉಳಿದಿವೆ. ಅದೇ ಈ ದ್ವೀಪಸ್ತೋಮದ ಅನನ್ಯ ವಿಶೇಷ.

**ಎನ್. ವಾಸುದೇವ್**